ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ

ಸಿ.ಸಿ. ನಂಬ್ರ: **198/24**
ಸಿ.ಡಬ್ಲ್ಯೂ- **8**
ಪಿ.ಡಬ್ಲ್ಯೂ- **9**

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಶ್ರೀಧರ್ |
| ತಂದೆಯ ಹೆಸರು | ಃ | ಡಿ ಎಸ್ ಶಂಕರ್ |
| ಪ್ರಾಯ | ಃ | 37 ವರ್ಷ |
| ಉದ್ಯೋಗ | ಃ | ಮುಖ್ಯ ಪೇದೆ, ಕೋಟ ಪೊಲೀಸ್ ಠಾಣೆ |
| ವಾಸ | ಃ | ಬೈಂದೂರು |

ದಿನಾಂಕಃ 08-04-2025 ರಂದು ಸಾಕ್ಷಿಗೆ ಪ್ರಮಾಣವಚನ ಭೋಧಿಸಲಾಯಿತು

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಹಕರಿಂದ

ನಾನು 2009 ರಿಂದ 2015 ರವರೆಗೆ ಶಂಕರನಾರಾಯಣ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ನಾನು ಈ ಪ್ರಕರಣದಲ್ಲಿ ದಿನಾಂಕಃ 30-09-2013 ರಂದು ನಾನು ಠಾಣೆಯಲ್ಲಿ ಇದ್ದಾಗ ಚಾಸಾ 1 ರವರಿಗೆ ಬೆಳಿಗ್ಗೆ 8.15 ಗಂಟೆಗೆ ಆಜ್ರಿ ಗ್ರಾಮದ ಹೆದ್ದಾರಿ ಜೆಡ್ಡು ನಿವಾಸಿಯಾದ ವಿ ಜೆ ಜಾನ್ಸನ್ ಎಂಬುವವರು ಯಾವುದೇ ಪರವಾನಿಗೆ ಇಲ್ಲದೇ ಒಂದು ಕೋವಿಯನ್ನು ಇಟ್ಟುಕೊಂಡಿರುತ್ತಾರೆ ಎಂಬ ಮಾಹಿತಿ ಬಂದಂತೆ ಚಾಸಾ 1 ರವರು ನಮ್ಮನ್ನು ಸೇರಿಸಿ ಕರೆದುಕೊಂಡು ಹೋಗಿದ್ದು, ಅವರ ಜೊತೆಗೆ ನಾನು, ಚಾಸಾ 4 ರಿಂದ ಚಾಸಾ 6 ರವರು ಚಾಸಾ 1 ರವರೊಂದಿಗೆ ಇಲಾಖಾ ಜೀಪಿನಲ್ಲಿ ಆಜ್ರಿ ಗ್ರಾಮದ ಜೋನುಮನೆ ಹೋಗುವ ದಾರಿಯಲ್ಲಿ ಚಾಸಾ 2 ಮತ್ತು 3 ರವರನ್ನು ಕರೆದುಕೊಂಡು ವಿ ಜೆ ಜಾನ್ಸನ್ ರವರ ಮನೆ ಅಂಗಳದಲ್ಲಿ ಹೋಗಿ ಜೀಪು ನಿಲ್ಲಿಸಿ 9.15 ಗಂಟೆಗೆ ನಾವು ಜೀಪಿನಿಂದ ಇಳಿದು ಮನೆಯ ಒಳಗೆ ಹೋಗುವ ಪ್ರವೇಶದ ಹತ್ತಿರ ಒಬ್ಬ ವ್ಯಕ್ತಿ ಕೋವಿಯನ್ನು ಸ್ವಚ್ಚ ಮಾಡುತ್ತಿದ್ದ. ಆಗ ಚಾಸಾ 1 ಹಾಗೂ ನಾವೆಲ್ಲರೂ ಆತತನ್ನು ಸುತ್ತುವರಿದಿರುತ್ತೇವೆ. ಚಾಸಾ 1 ರವರು ಆಗ ಆತನ ಹೆಸರನ್ನು ಕೇಳಿದಾಗ ತನ್ನ ಹೆಸರು ವಿ ಜೆ ಜಾನ್ಸನ್

42 ವರ್ಷ, ತಂದೆ ಜೋಸೇಪ್ ಹೆದ್ದಾರಿಜೆಡ್ಡು, ಆಜ್ರಿ ಗ್ರಾಮ, ಕುಂದಾಪುರ ಎಂದು ಹೇಳಿರುತ್ತಾರೆ. ಆತನ ಬಳಿ ಪರವಾನಿಗೆ ಕೇಳಿದಾಗ ಇಲ್ಲ ಎಂದು ಹೇಳಿರುತ್ತಾರೆ. ಕೋವಿಯನ್ನು ಯಾರು ಕೊಡಿಸಿದ್ದರು ಎಂದು ಕೇಳಿದಾಗ ಆಜ್ರಿ ಗ್ರಾಮದ ಕಮ್ಮಾರು ಶಾಲೆಯ ಶಂಕರ ಆಚಾರಿಯವರು 8 ವರ್ಷಗಳ ಹಿಂದೆ ಕೊಡಿಸಿರುವುದಾಗಿ ಹೇಳಿರುತ್ತಾರೆ.

ಆತ ಎಲ್ಲಿ ಇದ್ದಾಗ ಎಂದು ಕೇಳಿದಾಗ ಆತ ಮೃತ ಪಟ್ಟಿರುವುದಾಗಿ ತಿಳಿಸಿರುತ್ತಾರೆ. ಚಾಸಾ 1 ರವರು ಸ್ಥಳದಲ್ಲಿಯೇ ಆತನ ಸ್ವ ಕುಶೀ ಹೇಳಿಕೆ ಪಡೆದಿರುತ್ತಾರೆ. ನಂತರ ಕೋವಿ ಪರಶೀಲಿಸಿದಾಗ ಕಪ್ಪು ಬಣ್ಣದ SBML ಕೋವಿಯಾಗಿರುತ್ತದೆ. ಸಾಕ್ಷಿ ನ್ಯಾಯಲಯದ ಮುಂದೆ ಇರುವ ಕೋವಿ ನೋಡಿ ಗುರುತಿಸಿದ್ದು, ಈಗಾಗಲೇ ಮು.ಮಾಲು 1 ಎಂದು ಗುರುತಿಸಲಾಗಿದೆ. ಚಾಸಾ 2 ಮತ್ತು 3 ರವರ ಸಮಕ್ಷಮದಲ್ಲಿ ಕೋವಿಯನ್ನು ಬಿಳಿ ಬಟ್ಟೆಯಲ್ಲಿ ಸುತ್ತಿ ಇಡಲಾಯಿತು. ಅಲ್ಲಿ ಸ್ವತ್ತು ಸ್ವಾಧೀನ ಮಹಜರು ಬರೆದು ಚಾಸಾ 1 ರವರು ನನ್ನ ಸಹಿ ಪಡೆದಿರುತ್ತಾರೆ. ಸ್ವತ್ತು ಸ್ವಾಧೀನ ಮಹಜರನ್ನು ಈಗಾಗಲೇ ನಿ.ಪಿ.1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.1(ಜಿ) ಎಂದು ಗುರುತಿಸಲಾಯಿತು. ಆ ದಿನ ದಸ್ತಗಿರಿ ಮಾಡಿದ ಆರೋಪಿಯನ್ನು ನ್ಯಾಯಲಯದ ಮುಂದೆ ನೋಡಿ ಸಾಕ್ಷಿ ಗುರುತಿಸಿರುತ್ತಾರೆ.

<u>ಪಾಟಿ ಸವಾಲುಃ ಆರೋಪಿತರ ಪರ ಶ್ರೀ ವೈ ಎನ್ ಕೆ. ವಕೀಲರಿಂದ</u>

1. ನಾವು ಠಾಣೆಯಿಂದ 7 ಜನ ಇಲಾಖಾ ವಾಹನನಿಂದ ಹೊರಟಿರುತ್ತೇವೆ. ಸಿದ್ದಾಪುರ ಕಮಲಶಿಲೆ ಕ್ರಾಸ್ ನಿಂದ ಆಜ್ರಿ ಗ್ರಾಮಕ್ಕೆ ಹೋದೆವು. ಚೋನಮನೆ ಎಂಬುದು ಆಜ್ರಿ ಪೇಟೆಯಿಂದ ಸುಮಾರು 2 ಕಿ.ಮೀ ಹಿಂದೆ ಬರುತ್ತದೆ ಎಂದರೆ ಸರಿ. ಚೋನಮನೆ ದಾಟಿದ ನಂತರ ಆಜ್ರಿಗೆ ಹೋಗಬೇಕು ಎಂದರೆ ಸರಿ. ಪಂಚರಿಬ್ಬರು ಚೋನಮನೆ ರಸ್ತೆಯ ದಾರಿಯಲ್ಲಿ ನಿಂತಿದ್ದರು. ಸಾರ್ವಜನಿಕರು ನಿಂತಿದ್ದರಿಂದ ಅವರನ್ನು ಕೇಳಿ ಪಿ ಎಸ್ ಐ ರವರು ಕೇಳಿದರು. ಅವರನ್ನು ಸಹ ನಮ್ಮ ಇಲಾಖಾ ವಾಹದಲ್ಲಿ ಕುರಿಸಿಕೊಂಡು ಹೋಗಿರುತ್ತೆವೆ. ಒಟ್ಟು 9 ಜನ ಘಟನಾ ಸ್ಥಳಕ್ಕೆ ಹೋಗಿರುತ್ತೇವೆ.

2. ಆಜ್ರಿ ಪೇಟೆ ಹಾಗೂ ಆರೋಪಿತನ ಮನೆಗೆ 3 ರಿಂದ 4 ಕಿ.ಮೀ ಅಂತರ ಇರುತ್ತದೆ. ಚೋನಮನೆಗೂ ಆರೋಪಿತನ ಮನೆಗೂ 1.5 ಕಿ.ಮೀ ಅಂತರ ಇರುತ್ತದೆ. ಆರೋಪಿ ಮನೆಗೆ ಹೋದಾಗ ಆರೋಪಿ ಇದ್ದ. ಆರೋಪಿ ಮನೆಯಿಂದ ರಸ್ತೆಗೆ 60 ಅಡಿ ದೂರ ಇರುತ್ತದೆ. ನಾವು ಹೋಗುತ್ತಿದ್ದು ಆರೋಪಿ ಮನೆಗೆ ಕಾಣಿಸುತ್ತಿತ್ತು ಎಂದರೆ ಸರಿ. ನಮ್ಮನ್ನು ನೋಡಿ ಆರೋಪಿತ ಓಡಿ ಹೋಗಲು ಪ್ರಯತ್ನಿಸಿರುವುದಿಲ್ಲ. ಆರೋಪಿಯ ಮನೆಯ ಹತ್ತಿರ 1 ಮನೆ ಇರುತ್ತದೆ. ಅದು ಆತನ ತಮ್ಮನ ಮನೆ. ಆರೋಪಿತ ಮನೆ ಮುಖ್ಯ ರಸ್ತೆಗೆ ತಾಗಿರುವುದು ಎಂದರೆ ಸರಿ.

3. ಅಲ್ಲಿ ವಾಹನಗಳ ಓಡಾಟ ಹಾಗೂ ಸಾರ್ವಜನಿಕರ ಓಡಾಟ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ವಿರಳವಾಗಿ ಇರುತ್ತದೆ ಎಂದು ನುಡಿಯುತ್ತಾರೆ. ನಾವು ಆರೋಪಿತನ ಮನೆಗೆ ದಾಳಿ ಮಾಡಿದಾಗ ಯಾವುದೇ ಸಾರ್ವಜನಿಕರು ಬಂದಿರುವುದಿಲ್ಲ. ಮು.ಮಾಲು 1 ನ್ನು ಆ ಸಮಯದಲ್ಲಿ ಆರೋಪಿತ ಮೆಟ್ಟಿಲ ಮೇಲೆ ಕುಳಿತು ಸ್ವಚ್ಛ ಮಾಡುತ್ತಿದ್ದ. ಬಟ್ಟೆ ತೆಗೆದುಕೊಂಡು ವರಿಸುತ್ತಿದ್ದನು. ಚಾಸಾ 1 ರವರು ಆರೋಪಿಯನ್ನು ಪ್ರಥಮವಾಗಿ ಹಿಡಿದರು. ಮು.ಮಾಲು ಸಮೇತ ಆತನನ್ನು ಹಿಡಿದುಕೊಂಡರು.

4. ದಾಳಿ ಮಾಡಿದ ಸಮಯ  ಮು.ಮಾಲು 1 ಉಪಯೋಗಿಸುವ  ಸ್ಥಿತಿಯಲ್ಲಿ ಇತ್ತೋ ಇಲ್ಲವೋ ಎಂದು ನಾವು ಪರೀಕ್ಷಿಸಿರುವುದಿಲ್ಲ.  ಆರೋಪಿತನ ಮನೆಯಲ್ಲಿ ಮದ್ದು ಗುಂಡುಗಳು ಸಿಕ್ಕಿರುವುದಿಲ್ಲ. ಮದ್ದು ಗುಂಡುಗಳನ್ನು ತಯಾರು ಮಾಡುವಂತಹ ಬೇಕಾಗುವ ವಸ್ತುಗಳು ಆರೋಪಿತನ ಮನೆಯಲ್ಲಿ ಸಿಕ್ಕಿರುವುದಿಲ್ಲ. ಆರೋಪಿತ ಕೋವಿಯನ್ನು ಉಪಯೋಗಿಸುವ ಪರಿಣಿತಿಯನ್ನು ಹೊಂದುಕೊಂಡ ಬಗ್ಗೆ ನಾವು ವಿಚಾರಿಸಿರುವುದಿಲ್ಲ.

5. ಕೋವಿಯನ್ನು ಉಪಯೋಗಿಸಲು ಪರಿಣಿತಿ ಅಗತ್ಯ ಇರುತ್ತದೆ ಎಂದರೆ ಸರಿ. ಆರೋಪಿತನಿಗೆ ಕೋವಿಯನ್ನು ಉಪಯೋಗಿಸಲು ಪರಿಣಿತಿ ಇರುವುದಿಲ್ಲ ಎಂದರೆ  ಸರಿಯಲ್ಲ. ಕೋವಿ ಆತನ ಬಳಿ ಇದ್ದುದರಿಂದ ಆತನಿಗೆ ಪರಿಣತಿ ಇರುತ್ತದೆ ಎಂದು ಹೇಳುತ್ತಿದ್ದೇನೆ. ಮು.ಮಾಲು 1 ಆರೋಪಿಯಿಂದ ಪಡೆದುಕೊಂಡ ಕೋವಿ ಎಂದು ಹೇಳಲು ಅದರ ಮೇಲೆ ವಿಶೇಷ ಗುರುತು ಇದೆಯಾ ಎಂದರೆ ಸಾಕ್ಷಿ ಯಾವುದೇ ಗುರುತು ಇರುವುದಿಲ್ಲ ಎಂದು ನುಡಿಯುತ್ತಾರೆ.  ಖಾಸಗಿ ವ್ಯಕ್ತಿಗಳು ತಯಾರು ಮಾಡಿದ ಕೋವಿಯೆಂದು ಎಲ್ಲಾದರೂ ಕಂಡು ಬರುತ್ತದಾ ಎಂದರೆ ಸಾಕ್ಷಿ ಆರೋಪಿತನೇ ಹೇಳಿರುತ್ತಾನೆ ಎಂದು ನುಡಿಯುತ್ತಾರೆ. ನಾವು ಆರೋಪಿತನ ಮನೆಯ ಮೇಲೆ  ದಾಳಿ ಮಾಡಿದ್ದು ಇಲ್ಲ ಹಾಗೂ ಯಾವುದೇ ಕೋವಿ ವಶಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಕೋವಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆ ದಿನ ಅಲ್ಲಿ ಪಂಚರು ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಠಾಣೆಯಲ್ಲಿ ಪಂಚನಾಮೆ ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ.  ಆರೋಪಿತ ಠಾಣಾಧಿಕಾರಿಯವರ ಎದುರು ಯಾವುದೇ ಕಬೂಲಾತಿ ಹೇಳಿಕೆ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮೇಲಾಧಿಕಾರಿಯವರ ಒತ್ತಡಕ್ಕೆ ಮಣಿದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

ಓದಿ ಹೇ, ಕೇ, ಸರಿ ಇದೆ.

ನನ್ನ ಹೇ. ಮೇ. ಬೆ. ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾದೀಶರು
ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ